## ಸಮಸ್ಯೆಗಳ ಭಾರವಡಿ ಭಾರತೀಯ ರೈತರು

ಕೆಲವೊಂದು ಸತ್ಯಾಂಶಗಳನ್ನು ಗಮನಿಸೋಣ: ೧. ಕಳೆದ ಕೆಲವು ವರ್ಷಗಳಲ್ಲಿ ೪೦೦೦೦ಕ್ಕೂ ಹೆಚ್ಚು ರೈತರು ಸಾಲದ ವಿಷಚಕ್ರದಲ್ಲಿ ಸಿಲುಕಿಯೊ, ಬೆಳೆ ನಾಶದಿಂದಲೊ ಅಥವಾ ತೀವ್ರದಾರಿದ್ರ್ಯದ ದೆಸೆಯಿಂದಲೊ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ೨. ಭಾರತದ ಅರ್ಧಕ್ಕೂ ಹೆಚ್ಚು ರೈತರು ಸಾಲಗಾರರು. ಆಂಧ್ರಪ್ರದೇಶದಲ್ಲಿ ಶೇಕಡ ೮೨ ಭಾಗ ರೈತರು ಮತ್ತು ತಮಿಳು ನಾಡಿನಲ್ಲಿ ೭೪.೫ ರಷ್ಟು ರೈತರು ಸಾಲಗಾರರು. ೩. ಕೃಷಿಯಿಂದ ಉಂಟಾಗುವ ವರಮಾನ ಕೇವಲ ಶೇಕಡ ೧.೫ ರಷ್ಟು ಹೆಚ್ಚಾಗುತ್ತಿದ್ದರೆ, ಅದಕ್ಕಾಗಿನ ವೆಚ್ಚ ಶೇಕಡ ೪ರಷ್ಟು ಹೆಚ್ಚಾಗುತ್ತಿದೆ. ೪. ಕೃಷಿಕಾರ್ಯಗಳಿಗೆ ಅಗತ್ಯವಾದ ಕಡಮೆ ಅವಧಿಯ ಸಾಲದ ಆವಶ್ಯಕತೆ ಒಂದು ವರ್ಷಕ್ಕೆ ರೂ.೧ ಲಕ್ಷ ಕೋಟಿಯಾದರೆ, ಬ್ಯಾಂಕ್ ಮುಂತಾದ ಹಣಕಾಸು ಸಂಸ್ಥೆಗಳಿಂದ ದೊರಕುತ್ತಿರುವ ಸಾಲದ ಪ್ರಮಾಣ ಅದರ ಶೇಕಡ ೧೨-೧೪ ಭಾಗ ಮಾತ್ರ.

ಈ ಮಾಹಿತಿಗಳನ್ನು ಮುಂದಿಟ್ಟಿರುವ ಇತ್ತೀಚಿನ THE OUT-LOOK ವಾರಪತ್ರಿಕೆಯು ತನ್ನ ಮುಖಪುಟದಲ್ಲಿ ನೀಡಿರುವ ಶೀರ್ಷಿಕೆ - "The Death of the Indian Farmer" ಎಂದು. ಮೈಸೂರಿನ ಹತ್ತಿರದ ಕೆಂಚನಗುಪ್ಪೆ ಗ್ರಾಮದ ಯುವ ರೈತರಾದ ಶ್ರೀಸಿದ್ಧರಾಮಯ್ಯನವರು ಹೀಗೆ ಹೇಳುತ್ತಾರೆ: "ರೈತರಾದ ನಾವು ನಮ್ಮ ಜೀವನದ ಅರ್ಧಭಾಗವನ್ನು ಒಳ್ಳೆಯ ಮಳೆ ಬೀಳಲಿ ಎಂದು ಎದುರು ನೋಡುವುದರಲ್ಲಿಯೇ ಕಳೆಯುತ್ತೇವೆ. ಹಾಗೊಮ್ಮೆ ಮಳೆಯಾದರೂ, ನಮ್ಮ ಬೆಳೆಗಳಿಗೆ ನಾವು ನಿರೀಕ್ಷಿಸಿದಷ್ಟು ಬೆಲೆ ದೊರೆಯುವುದೇ ಇಲ್ಲ. ಹೀಗೆ ವ್ಯವಸಾಯ ಯಾವತ್ತೂ ಲಾಭದಾಯಕ ಉದ್ಯಮವಲ್ಲವೇ ಅಲ್ಲ."

ಈ ಕರಾಳ ಪರಿಸ್ಥಿತಿಗೆ ಕೆಲವು ಕಾರಣಗಳು: ಅತಿ ಸಣ್ಣ ಹಿಡುವಳಿಗಳು, ಸಣ್ಣ ರೈತರ ಹಿತಾಸಕ್ತಿಗಳಿಗೆ ವಿರುದ್ಧವಾದ ಆರ್ಥಿಕ ಮತ್ತು ವಾಣಿಜ್ಯ ವ್ಯವಸ್ಥೆ, ವರ್ಷದಿಂದ ವರ್ಷಕ್ಕೆ ಕಡಮೆಯಾಗುತ್ತಿರುವ ಮಳೆಯ ಪ್ರಮಾಣ, ಸುಧಾರಿತ ಬೇಸಾಯಕ್ರಮಗಳನ್ನು ಕೈಗೊಳ್ಳಲು ಹಣದ ಅಭಾವ ಮತ್ತು ರೈತರಲ್ಲಿ ಶಿಕ್ಷಣ ಮತ್ತು ಸಾಮಾನ್ಯ ಜ್ಞಾನದ ಅಭಾವ.

**ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು** – ಎನ್ನುವ ಸರ್ವಜ್ಞನ ವಚನ ಇಂದು ಪ್ರಶ್ನಾರ್ಹವಾಗಿದೆ. ಮೋಸ–ವಂಚನೆಗಳಿಗೆ ಅವಕಾಶವಿಲ್ಲದ, ಲೋಕಕ್ಕೆ ಅನ್ನ ನೀಡುವ ರೈತನ ನಿಸ್ಪೃಹ ಬದುಕು ಇಂದು ದುರ್ಭರವಾಗಿದೆ. ಬೆವರು ಹರಿಸಿ ರಕ್ತ ಸುರಿಸಿ ಪರಿಶುದ್ಧ ಕಾಯಕ ಮಾಡುವ ರೈತ, ಸಾಲ ವ್ಯವಸ್ಥೆಯ ಬಲಿಪಶುವಾಗಿದ್ದಾನೆ.

ನಗರಪ್ರಾಧಾನ್ಯವಾದ, ಭೋಗಪ್ರವೃತ್ತಿಯನ್ನು ಉತ್ತೇಜಿಸುವ ಆರ್ಥಿಕ ವ್ಯವಸ್ಥೆ ಗ್ರಾಮೀಣ ರೈತರ ಪ್ರಾಣವನ್ನು ಹಿಂಡುತ್ತಿದೆ. ಕೃಷಿಯನ್ನೇ ಕೇಂದ್ರವಾಗಿಟ್ಟುಕೊಂಡ ಆರ್ಥಿಕವ್ಯವಸ್ಥೆ ಮೈದಳೆಯದವರೆಗೂ, ಈ ಬವಣೆ ತಪ್ಪದಲ್ಲ. ಇದಕ್ಕೆ ಕಾರಣ ನಮ್ಮ ಸಾಂಪ್ರದಾಯಿಕ ಮೌಲ್ಯಗಳ ಅಧಃಪತನ. ಅದು ನಮ್ಮ ಸಮಾಜ ಜೀವನದ ಎಲ್ಲ ಕ್ಷೇತ್ರಗಳಲ್ಲಿ ದುಷ್ಪರಿಣಾಮ ಬೀರುತ್ತಿದೆ. ಆದ್ದರಿಂದ ನಮ್ಮ ಮುಖ್ಯವಾದ ಕಾರ್ಯ ಜೀವನ ಮೌಲ್ಯಗಳ **ಸಂರಕ್ಷಣೆ ಮತ್ತು ಸಂವರ್ಧನೆ**. ನಮ್ಮ ಸಂಸ್ಕೃತಿ, ಧರ್ಮ ಮತ್ತು ಆಧ್ಯಾತ್ಮಿಕತೆಗಳು ಈ ಮೌಲ್ಯಗಳ ಸೆಲೆಗಳಾಗಿವೆ. ಅವುಗಳಿಲ್ಲದೆ ನಮ್ಮ ಬಾಳು ಬರಿಯ ಬೆಂಗಾಡು.

✡




## ಜಾಗತಿಕ ದಿನಾಂಕ – ಜುಲೈ ೪

ಜುಲೈ ೪, ಯಾರಿಗೆ ಗೊತ್ತಿಲ್ಲ? ಅಮೆರಿಕೆಯ ಸ್ವಾತಂತ್ರ್ಯ ದಿನ ಅದು. ಆಧುನಿಕ ಜಗತ್ತಿನಲ್ಲಿ ಸಮಾನತೆ, ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವ ಭಾವನೆಗಳ ತವರೂರು ಅಮೆರಿಕೆ ಎನ್ನುವುದು ಎಲ್ಲರಿಗೂ ತಿಳಿದ ವಿಷಯ. ಈ ಬಗೆಯ ಸ್ವಾತಂತ್ರ್ಯ ಮತ್ತು ಸಮಾನತೆಗಳನ್ನು ವೇದಾಂತದ ಬೆಳಕಿನಲ್ಲಿ, ಆಧ್ಯಾತ್ಮಿಕ ಅನುಭವದ ಉನ್ನತ ಸ್ತರದಲ್ಲಿ ಪ್ರತಿಪಾದಿಸಿದ ಸ್ವಾಮಿ ವಿವೇಕಾನಂದರು ತಮ್ಮ ದೇಹ ಬಂಧನದಿಂದ ಕಳಚಿಕೊಂಡು ಮುಕ್ತರಾದ ದಿವಸವೂ ಇದೇ.

೧೯೪೭ ರಲ್ಲಿ ಅಂದಿನ ಪ್ರಧಾನ ಮಂತ್ರಿ ಕ್ಲೆಮೆಂಟ್ ಅಟ್ಲೀ ಅವರ ಮುಂದಾಳುತನದ ಬ್ರಿಟನ್ನಿನ ಲೇಬರ್ ಸರ್ಕಾರವು ಭಾರತಕ್ಕೆ ಸ್ವಾತಂತ್ರ್ಯವನ್ನು ನೀಡಬೇಕೆಂದು ಪ್ರಸ್ತಾಪಿಸುವ ಮಸೂದೆಯನ್ನು ಎಂದು ಬ್ರಿಟಿಷ್ ಸಂಸತ್ತಿನಲ್ಲಿ ಮಂಡಿಸಿದ್ದು ಎಂದು ಗೊತ್ತೆ? ಅದೂ ಜುಲೈ ೪ ರಂದೇ ಎಂದು ಹೇಳುತ್ತದೆ ಜುಲೈ ೪, ೨೦೦೫ ರ Vijaya Times ಪತ್ರಿಕೆಯಲ್ಲಿ ಪ್ರಕಟವಾದ ಒಂದು ವರದಿ. ಹೀಗೆ ವಿಶ್ವದೆಲ್ಲೆಡೆ ಜನರಲ್ಲಿ ಇರುವ ಸ್ವಾತಂತ್ರ್ಯ ಬಯಕೆಯನ್ನು ಜುಲೈ ೪ ಪ್ರತಿನಿಧಿಸುತ್ತದೆ.

ಭಾರತಕ್ಕೆ ಸ್ವಾತಂತ್ರವನ್ನು ನೀಡಲು ಖಡಾಖಂಡಿತವಾಗಿ ವಿರೋಧಿಸುತ್ತಿದ್ದವರು, ಎರಡನೆಯ ಮಹಾಯುದ್ಧದ ಹೀರೋ ಎಂದೇ ಪರಿಗಣಿಸಲ್ಪಟ್ಟಿದ್ದ ಆಗಿನ ಪ್ರಧಾನಿ ವಿನ್‌ಸ್ಟನ್ ಚರ್ಚಿಲ್. ಎರಡನೆಯ ಮಹಾಯುದ್ಧದಲ್ಲಿ ಬ್ರಿಟನ್ ವಿಜಯಗಳಿಸಿತಾದರೂ, ತನ್ನ ಸಾಮ್ರಾಜ್ಯದ ಮೇಲಿನ ಅದರ ಹಿಡಿತ ಸಡಿಲವಾಗುತ್ತ ಹೋಗುತ್ತಿತ್ತು. ಇದಲ್ಲದೆ, ಅಮೆರಿಕಾ ದೇಶದ ಅಧ್ಯಕ್ಷ ರೂಸ್‌ವೆಲ್ಟ್ ಮತ್ತು ಮಾಧ್ಯಮದವರು ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯ ಕೊಡುವ ಪಕ್ಷದಲ್ಲಿ ಇದ್ದರು. ೧೯೪೫ರಲ್ಲಿ ಇಂಗ್ಲೆಂಡಿನಲ್ಲಿ ಕನ್ಸರ್ವೇಟಿವ್ ಪಕ್ಷವು ಸೋಲನ್ನಪ್ಪಿತು. ಅದರೊಂದಿಗೆ ಭಾರತದ ಸ್ವಾತಂತ್ರದ ಗಳಿಕೆಗೂ ವೇದಿಕೆ ನಿರ್ಮಾಣವಾಯಿತು.

ಆದರೆ ಸ್ವಾತಂತ್ರವೆನ್ನುವುದು ಕೇವಲ ರಾಜಕೀಯ ಸ್ವಾತಂತ್ರಕ್ಕೆ ಮಾತ್ರ ಸೀಮಿತವಾಗಿಲ್ಲ. ಸ್ವಾತಂತ್ರ್ಯ ಸಂಪೂರ್ಣವಾಗಬೇಕಾದರೆ, ಆರ್ಥಿಕ, ಸಾಮಾಜಿಕ, ಮಾನಸಿಕ ಮತ್ತು ಭಾವನಾತ್ಮಕವಾಗಿಯೂ ವ್ಯಕ್ತಿಯೊಬ್ಬ ಬೇರೆಯವರ ಹಂಗಿಲ್ಲದೆ ಸ್ವತಂತ್ರ ಜೀವನ ನಡೆಸಬಲ್ಲ ಪೂರ್ಣ ಹಕ್ಕನ್ನು ಪಡೆಯಬೇಕು. ಇದೇ ನಿಜವಾದ ಸ್ವಾತಂತ್ರ್ಯ.

ಸ್ವಾಮಿ ವಿವೇಕಾನಂದರು ೧೮೯೮, ಜುಲೈ ೪ರಂದು, "**ನಾಲ್ಕನೆಯ ಜುಲೈಯನ್ನು ಕುರಿತು**" ಎನ್ನುವ ಪದ್ಯವನ್ನೇ ರಚಿಸಿದರು. ಅದರಲ್ಲಿ ಅವರು ಭಗವಂತನನ್ನು ಸ್ವಾತಂತ್ರ್ಯದ ಬೆಳಗನ್ನು ಹರಡುವ ಜ್ಯೋತೀಶ್ವರನಂತೆ ಭಾವಿಸಿ, ಹೀಗೆ ಪ್ರಾರ್ಥಿಸುತ್ತಾರೆ: "ಹೇ ಪರಮೇಶ್ವರನೇ, ಪ್ರತಿಯೊಂದು ದೇಶವೂ ನಿನ್ನ ಕಾಂತಿಯನ್ನು ಪ್ರತಿಬಿಂಬಿಸಲಿ, ತಮ್ಮ ಬಂಧನಗಳು ಕಳಚಿಬಿದ್ದಿರುವುದನ್ನು ಸ್ತ್ರೀ ಪುರುಷರು ಎದ್ದು ನಿಂತು ನೋಡಲಿ, ಅವರೆಲ್ಲರೂ ಕೂಡ ತಮ್ಮ ಬಾಳಿಗೆ ಹೊಸ ಬೆಳಕು ಬಂದಿರುವುದನ್ನು ಸಂತೋಷದಿಂದ ಅರಿಯಲಿ." ✡

**ತಿದ್ದುಪಡಿ**

ಈ ಪತ್ರಿಕೆಯ ಜುಲೈ ೨೦೦೫ ಸಂಚಿಕೆಯ ಪುಟ ೧೩ರಲ್ಲಿ ಸ್ವಾಮಿ ರಂಗನಾಥಾನಂದಜಿಯವರ ಮಹಾಸಮಾಧಿಯ ದಿನಾಂಕ ಮುದ್ರಿತವಾದಂತೆ ಮೇ ೨೫, ೨೦೦೫ ಅಲ್ಲ. ಅದಕ್ಕೆ ಬದಲಾಗಿ ಏಪ್ರಿಲ್ ೨೫, ೨೦೦೫ ಎಂದು ಓದಿಕೊಳ್ಳಬೇಕಾಗಿ ಓದುಗರಲ್ಲಿ ವಿನಂತಿ. ಈ ತಪ್ಪಿಗಾಗಿ ವಿಷಾದಿಸುತ್ತೇವೆ. – *ಸಂ.*